ಶ್ರೀ ಎಂ. ಮಲ್ಲಪ್ಪ.—ಆದರ ಬಗ್ಗೆ ಡೀಟೈಲ್ಸ್ ಎಲ್ಲಾ ನನ್ನ ಬಳಿ ಇಲ್ಲ. ತಾವು ಆದರ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಕೆ. ವೆಂಕಟರಾಮಯ್ಯ.—ಸ್ವಾಮಿ, ಈಗ ೩೦ ಜನ ಆಯುರ್ವೇದ ವೈದ್ಯರನ್ನು ಪಂಗಾಮಿಯಾಗಿ ನೇಮಿಸಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಪಬ್ಲಿಕ್ ಸರ್ವೀಸ್ ಕಮಿಷನ್ ಇರುವಾಗ ಪಂಗಾಮಿಯಾಗಿ ನೇಮಿಸಿಕೊಳ್ಳುವ ಉದ್ದೇಶ ಏನು ? ಈಗ ಡೈರೆಕ್ಟರ್ ಏನು ಇವ್ವಾರೆ ಅವರು ಪಂಗಾಮಿಯೋ ಅಥವಾ ಖಾಯಂ ಆಗಿವ್ವಾರೋ ತಿಳಿಸಬೇಕು ?

ಶ್ರೀ ಎಂ. ಮಲ್ಲಪ್ಪ.—ಈಗ ಡೈರೆಕ್ಟರ್ ಇನ್‌ಚಾರ್ಜ ಅರೇಂಜ್‌ಮೆಂಟ್ ಮಾಡಿವ್ವಾರೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಬೇಕಾಗಿದೆ. ಇದು ಫೈನಲೈಜೇಷನ್ ಆದಮೇಲೆ ಇವರನ್ನೆಲ್ಲಾ ಖಾಯಂಗೊಳಿಸಬೇಕು. ಈಗ ಅವಶ್ಯಕತೆಗನುಗುಣವಾಗಿ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರ ನೇಮಿಸಿಕೊಂಡಿದ್ದು ಅವರು ಕೆಲಸ ಮಾಡುತ್ತಿದ್ದಾರೆ. ಈಗ ತುರ್ತು ಅವಶ್ಯಕತೆ ಇದೆಯೆಂದು ಈ ರೀತಿಯ ಒಂದು ಅರೇಂಜ್‌ಮೆಂಟ್ ಮಾಡಿದ್ದೇವೆ.

ಶ್ರೀ ಪೆಟ್. ಗಂಗಾಧರನ್.—ರಾಜ್ಯದಲ್ಲಿ ಸುಮಾರು ೧೦ ವರ್ಷದಿಂದ ಈ ಆಯುರ್ವೇದ ಪ್ರೊಫೆಸರ್, ಟೆಂಪರರಿಯಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಆಯುರ್ವೇದ ಡಾಕ್ಟರುಗಳು ಟೆಂಪರರಿಯಾಗಿ ಕೆಲಸ ಮಾಡಿದ ೬ ತಿಂಗಳ ನಂತರ ಸಂಬಳ ಕೊಡುತ್ತಾರೆಂದು ತಿಳಿದು ಬಂದಿದೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಪ್ಪ.—ಕಾಲ ಕಾಲಕ್ಕೆ ಸರಿಯಾಗಿ ಅವರಿಗೆ ಸಂಬಳ ಕೊಡುತ್ತಿದ್ದೇವೆ. ಈಗ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದೇ ಇರುವುದರಿಂದ ಪಂಗಾಮಿಯಾಗಿ ನೇಮಕ ಮಾಡಿಕೊಂಡಿದ್ದೇವೆ. ಈಗ ಎಲ್ಲಾ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ. ಪಬ್ಲಿಕ್ ಸರ್ವೀಸ್ ಕಮಿಷನ್ ಅನುಮತಿ ಬಂದನಂತರ ಖಾಯಂ ಗೊಳಿಸಲಿಕ್ಕೆ ತೀರ್ಮಾನ ಮಾಡುತ್ತೇವೆ.

ಶ್ರೀ ಪೆಟ್. ಗಂಗಾಧರನ್.—ಎಷ್ಟು ದಿವಸದಲ್ಲಿ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಆದಷ್ಟು ಶೀಘ್ರದಲ್ಲಿ ಮಾಡುತ್ತೇವೆ.

ಶ್ರೀ ಜಿ. ಕೆ. ತಕ್ಕೇದ್.—ಹೋಮಿಯೋಪತಿ ವೈದ್ಯಕೀಯ ಚಿಕಿತ್ಸೆಯು ಸಲುವಾಗಿ ಯಾವ ಯೋಜನೆಗಳನ್ನು ಕೈಗೊಂಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಪ್ಪ.—ಇದಕ್ಕಾಗಿ ೧೯೭೪-೭೫ರಲ್ಲಿ ೫೦,೦೦೦, ೧೯೭೬-೭೭ರಲ್ಲಿ ೫೦,೦೦೦, ೧೯೭೭-೭೮ರಲ್ಲಿ ಒಂದು ಲಕ್ಷ ಮತ್ತು ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಇದಕ್ಕೆ ಏನೇನು ಸೌಕರ್ಯಗಳು ಬೇಕೋ ಅದನ್ನೆಲ್ಲಾ ಒದಗಿಸುತ್ತಿದ್ದೇವೆ, ಪ್ರೋತ್ಸಾಹ ಕೊಡುತ್ತಿದ್ದೇವೆ.

12-30 P. M.

Discontinuance of Permits for Firewood

342. SRI M. C. NANAIAH (Madikeri).—Will the Minister for Food and Forest be pleased to state:—

(a) the reasons for discontinuing the supply of firewood, from the forest areas for *bona fide* use, after collecting the pass fee of Rs. 5 (five) ;

(b) the alternative arrangement made to supply firewood to those who are not economically in a position to purchase fuel from the depots ?

SRI G. RAMEGOWDA (Minister for Food and Forest).—

(a) To prevent wanten destruction and damage to forests.

(b) Government have opened a number of firwood depots in areas where the system of issue of pre-paid licences has been discontinued and where there is demand for firewood, to cater to the *bona fide* domestic needs of the local people, who are not economically in a position to buy from the open market in view of high rates.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶದಲ್ಲಿ ಜನ ಬಹಳಷ್ಟು ಸೌದೆ ಬವಣೆಯನ್ನು ಪಡುತ್ತಾ ಇದ್ದಾರೆ. ಆರ್ಥಿಕವಾಗಿ ಸಾಮರ್ಥ್ಯ ಇಲ್ಲದೇ ಇರತಕ್ಕವರಿಗೆ ಪ್ರಿ-ಪೈಯ್ಡ್ ಲೈಸನ್ಸ್‌ಕೊಟ್ಟು ಅವರು ಕಾಡಿನಿಂದ ಸೌದೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಈಗ ಸರ್ಕಾರ ಆದನ್ನು ಏಕಾಏಕಿ ಬದಲಾವಣೆ ಮಾಡಲಿಕ್ಕೆ ಏನು ಕಾರಣ ?

†ಶ್ರೀ ಜಿ. ರಾಮೇಗೌಡ.—ಆದನ್ನು ಏಕಾಏಕಿ ಬದಲಾವಣೆ ಮಾಡಿಲ್ಲ. ಬಹಳ ವರ್ಷಗಳ ಅನುಭವದ ಪ್ರಕಾರ ಮಾಫಿ ಲೈಸನ್ಸ್ ತೆಗೆದುಕೊಂಡವರು ಒಣ ಸೌದೆಯನ್ನು ತರುವುದಕ್ಕೆ ಬದಲು ಅರಣ್ಯಕ್ಕೆ ಹೋಗಿ ಹಸಿ ಸೌದೆಯನ್ನು ಒಣ ಸೌದೆ ಮಾಡಿ ತರುತ್ತಾ ಇದ್ದದ್ದು ಕಂಡುಬಂದದ್ದರಿಂದ ಈ ಒಂದು ತೀರ್ಮಾನಕ್ಕೆ ಬರಲಾಗಿದೆ.

ಶ್ರೀ ಎಂ. ಸಿ. ನಾನಯ್ಯ.—ಅರಣ್ಯಾಧಿಕಾರಿಗಳು ಅಲ್ಲಿರುವಾಗ ಇದನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಿರಲಿಲ್ಲವೇ ?

ಶ್ರೀ ಜಿ. ರಾಮೇಗೌಡ.—ಒಂದೊಂದು ಕಡೆಯಲ್ಲಿ ೨೦-೨೫ ಸಾವಿರ ಎಕರೆಗೆ ಒಬ್ಬೊಬ್ಬ ಅಧಿಕಾರಿ ಇರುತ್ತಾರೆ. ಅವರು ಕಾಡಿನ ಒಳಗೆ ಹೋಗಿ ಕೆಲಸಮಾಡುವಂತಹವರ ಮೇಲೆ ಸೂಪರ್‌ವಿಷನ್‌ಮಾಡಿ ತಡೆಹಾಕತಕ್ಕ ಶಕ್ತಿ ಒಂದೊಂದು ಸಮಯದಲ್ಲಿ ಅವರಿಗೆ ಇರುವುದಿಲ್ಲ. ಆದುದರಿಂದ ಇದನ್ನು ತಡೆಯುವುದಕ್ಕೆ ಆಗಲಿಲ್ಲ.

ಶ್ರೀ ಎಂ. ಸಿ. ನಾನಯ್ಯ.—ಮಾನ್ಯ ಅರಣ್ಯ ಖಾತೆ ಮಂತ್ರಿಗಳು ಪ್ರೀ-ಪೈಯ್ಡ್ ಲೈಸನ್ಸ್ ಎಲ್ಲೆಲ್ಲಿ ನಿಲ್ಲಿಸಿದ್ದಾರೋ ಅಲ್ಲೆಲ್ಲಾ ಡಿಪೋಗಳನ್ನು ತೆರೆದು ಸೌದೆ ವಿತರಣೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಒಂದು ಟನ್‌ಗೆ ೮೦ ರೂಪಾಯಿ ಆಗುತ್ತದೆ. ಒಡ ಕುಟುಂಬಕ್ಕೆ ಒಂದು ದಿವಸಕ್ಕೆ ೧೦ ರೂಪಾಯಿ ಸೌದೆ ಬೇಕಾಗುತ್ತದೆ. ಅವರು ೧೦ ರೂಪಾಯಿ ಕೊಟ್ಟು ಸೌದೆ ತರಲಿಕ್ಕೆ ಆಗುವುದಿಲ್ಲ. ಅಂತಹವರಿಗೆ ಏನು ಬದಲಿ ವ್ಯವಸ್ಥೆ ಮಾಡಿದ್ದೀರಿ.

ಶ್ರೀ ಜಿ. ರಾಮೇಗೌಡ.—ಮಾಫಿ ಲೈಸನ್ಸ್ ನಿಲ್ಲಿಸಿರುವುದರಿಂದ ಅರಣ್ಯ ಇಲಾಖೆ ಕಾರ್ಪೊರೇಷನ್ ಆಗಲೀ, ಯಾವುದಾದರೂ ಒಂದು ಸಂಸ್ಥೆ ಡಿಪೋಗಳನ್ನು ಇಟ್ಟುಕೊಂಡು ಲೋಕಲ್ ಮಾರ್ಕೆಟಿಗಿಂತಲೂ ೩೦-೪೦-೪೦ ರೂಪಾಯಿ ಕಡಿಮೆ ರೇಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ದುರ್ಬಲವರ್ಗದ ವರಿಗೆ ಸಹಾಯವಾಗುತ್ತಾ ಇದೆ.

ಶ್ರೀ ಎಂ. ಸಿ. ನಾನಯ್ಯ.—ಆರ್ಥಿಕವಾಗಿ ಸಾಮರ್ಥ್ಯ ಇಲ್ಲದವರಿಗೆ ಏನು ಬದಲಿ ಏರ್ಪಾಟು ಮಾಡಿದ್ದೀರಿ. ಒಂದು ಕುಟುಂಬಕ್ಕೆ ಒಂದು ದಿವಸಕ್ಕೆ ೧೦ ರೂಪಾಯಿ ಸೌದೆ ಬೇಕಾಗುತ್ತದೆ. ಆರ್ಥಿಕವಾಗಿ ಕಳೆಗೆ ಇರತಕ್ಕವರು ೫ ರೂಪಾಯಿ ಕೊಡುವುದಕ್ಕೆ ಶಕ್ತಿ ಇಲ್ಲದೇ ಇರುವಾಗ ೧೦ ರೂಪಾಯಿ ಹೇಗೆ ಕೊಡುತ್ತಾರೆ ?

ಶ್ರೀ ಜಿ. ರಾಮೇಗೌಡ.—ನನಗೆ ತಿಳಿದಿರುವಮಟ್ಟಿಗೆ ಆ ಜಿಲ್ಲೆಯಲ್ಲಿ ೧೦೦ ರೂಪಾಯಿಗೆ ಮೇಲೆ ನಾವು ಗೊತ್ತುಮಾಡಿಲ್ಲ. ನಾನು ವೆರಿಫೈ ಮಾಡುತ್ತೇನೆ. ಮರ್‌ಕೆರಾ ಲೋಕಲ್ ಮಾರ್ಕೆಟಿನಲ್ಲಿ ರೇಟ್ ೧೪೦ ರೂಪಾಯಿ ಇದೆ, ಬೆಂಗಳೂರಿನಲ್ಲಿ ೨೨೦ ರೂಪಾಯಿಗಳಿಗಿಂತಲೂ ಜಾಸ್ತಿ ಇದೆ. ಸಣ ಒಂದು ಬಡ ಸಂಸಾರಕ್ಕೆ ದಿವಸಕ್ಕೆ ೧೦ ರೂಪಾಯಿನ ಸೌದೆ ಬೇಕು ಎಂದರೆ ನನಗೆ ಅರ್ಥವಾಗುವುದಿಲ್ಲ. ಲಾಭವಿಲ್ಲದೆ, ನಷ್ಟವಿಲ್ಲದೆ ಏರ್ಪಾಟು ಮಾಡಿರತಕ್ಕ ವ್ಯವಸ್ಥೆ ಅರಣ್ಯ ಇಲಾಖೆಯಲ್ಲಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಹಳ್ಳಿಗಾಡಿನವರಿಗೆ ಪರವಾನಗಿಯನ್ನು ಕೊಡುತ್ತಿದ್ದೀರಿ. ಸಣ್ಣ ಸಣ್ಣ ಪಟ್ಟಣಗಳಲ್ಲಿ ರೈತರು ವ್ಯವಸಾಯದಿಂದ ಜೀವನ ಮಾಡುವವರಿದ್ದಾರೆ. ಅಲ್ಲಿ ಪರವಾನಗಿ ಕೊಡುತ್ತಾ ಇಲ್ಲ. ಇವರಿಗೆ ಡಿಪೋಗಳಲ್ಲಿ ಹೋಗಿ ಸೌದೆ ತರುವುದಕ್ಕೆ ಶಕ್ತಿ ಇರುವುದಿಲ್ಲ. ಆದುದರಿಂದ ಹಳ್ಳಿಗಳಲ್ಲಿರುವ ವರಿಗೆ ಪರವಾನಗಿ ಕೊಡುವ ಹಾಗೆ ಇವರಿಗೂ ಪರವಾನಗಿಯನ್ನು ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಈಗ ಮಾಫಿ ಲೈಸನ್ಸ್ ಕೊಡುವುದನ್ನು ನಿಲ್ಲಿಸಂತ್ತಾ ಇದ್ದೇವೆ. ಕೆಲವು ಕಡೆ ನಿಲ್ಲಿಸಿದ್ದೇವೆ. ಎಲ್ಲೆಲ್ಲಿ ನಿಲ್ಲಿಸಲಿಕ್ಕೆ ಆಗಿಲ್ಲ ಅಲ್ಲಿ ನಿಲ್ಲಿಸಲು ಪ್ರಯತ್ನಮಾಡುತ್ತಿದ್ದೇವೆ, ಸ್ಯಾಟಿಸ್ಫಿಕ್ಟ್ ತರಿಸುತ್ತಾ ಇದ್ದೇವೆ. ಹಳ್ಳಿಗಳಲ್ಲೆಲ್ಲಾ ಲೈಸನ್ಸ್ ಕೊಡುವುದನ್ನು ನಿಲ್ಲಿಸುತ್ತಿರುವಾಗ ಪಟ್ಟಣಗಳಲ್ಲಿ ಕೊಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ.

ಶ್ರೀ ಸಿ. ಎ. ಚಿಂದ್ರೇಗೌಡ.—ಪಟ್ಟಣಗಳಲ್ಲಿ ಸೌದೆ ಮಾರಾಟಮಾಡುವ ವ್ಯವಸ್ಥೆ ಮಾಡಿದ್ದೀರಿ, ಸಂತೋಷ. ಕೆಲವು ಕಡೆ ಈ ಸೌದೆ ನಿರುಪಯುಕ್ತವಾಗಿ ಗಂಟುಗಳಿಂದ ಕೂಡಿರುತ್ತೆ. ಈ ಸೌದೆ ಉರಿಯುವುದಿಲ್ಲ, ವಾಗನೆ ಬರುತ್ತದೆ ಎಂದು ಸಾರ್ವಜನಿಕರಿಂದ ದೂರು ಬರುತ್ತಾ ಇದೆ. ಆದುದರಿಂದ ಕೊಳ್ಳ ತಕ್ಕವರು ಆರಿಸಿ ಸೌದೆಯನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ. ತರಕಾರಿ ಮಾರ್ಕೆಟಿಗೆ ಹೋಗಿ ಒಳ್ಳೆಯ ತರಕಾರಿಯನ್ನು ಆರಿಸಿ ತೆಗೆದು ಕೊಂಡು ಬರುವ ಹಾಗೆ ಸೌದೆಯನ್ನು ತರುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಆಲೋಚನೆ ಮಾಡ ಬೇಕಾಗುತ್ತದೆ,

Tourist Facilities at Arkavathi-Kaveri, Sangama and Mekedatu.

392. SRI K. L. SHIVALINGE GOWDA (Sathanur) —Will the Minister for Transport and Tourism be pleased to state.—

(*a*) whether the 'Sangama' of Arkavathi and Kaveri rivers at Uyambali Hobli in Kanakapur Taluk and Mekedatu which is of Historical importance is included in the Tourism Department ;

(*b*) if so, the facilities provided to the Tourists in those places ;

(*c*) whether it has come to notice of the Government that hundreds of Tourists visit those places daily ;

(*d*) if these places are not included in the Tourism Department, whether the Government would at least now include them and take action to provide facilities for the Tourists ?

SRI R. GUNDURAO (Minister for Transport and Tourism).—

(*a*) No.

(*b*) This question does not arise, in view of the reply to clause(*a*)

(*c*) yes.

(*d*) It is not possible to include all the sight seeing places to the Tourism Department. But the possibilities of providing necessary facilities there, will be considered.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಅಲ್ಲಿ ಪ್ರತಿನಿತ್ಯ ನೂರಾರು ಜನ ಪ್ರವಾಸಿಗರು ಹೋಗು ತ್ತಿದ್ದಾರೆ ಎನ್ನುವುದನ್ನು ಒಪ್ಪಿಕೊಂಡಿದ್ದೀರಿ. ಅವರಿಗೆ ಊಟ, ವಸತಿ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ?